# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 151
ಸದಸ್ಯರ ಹೆಸರು : ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 10/12/2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ನಡೆಯುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ ಸಂಖ್ಯೆಯೆಷ್ಟು; ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಒಟ್ಟು 819 ವಸತಿ ಶಾಲಾ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ಶಾಲಾ ಕಾಲೇಜುಗಳಲ್ಲಿ ಒಟ್ಟು 4059 ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳು ಹಾಗೂ 7908 ಹೊರಸಂಪನ್ಮೂಲ ಬೋಧಕ /ಬೋಧಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. |
| ಆ) | ಅಗತ್ಯ ಸಿಬ್ಬಂದಿಗಳ ಮತ್ತು ಸೃಷ್ಟಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಆ ಪೈಕಿ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು; (ಹುದ್ದೆವಾರು ವಿವರ ನೀಡುವುದು) | ಒಟ್ಟು 17376 ಹುದ್ದೆಗಳು ಸೃಜನೆಯಾಗಿರುತ್ತವೆ. ಈ ಹುದ್ದೆಗಳ ಪೈಕಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಜಿಲ್ಲಾವಾರು ಮತ್ತು ಹುದ್ದೆಗಳವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ. |
| ಇ) | ಆ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ 2018-19 ನೇ ಸಾಲಿನಲ್ಲಿ ಒಟ್ಟು 143819 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. |
| ಈ) | ಕ್ರೈಸ್ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ವಸತಿ ಶಾಲೆಗಳ ಶಿಕ್ಷಕರಿಗೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ತತ್ಸಮಾನ ವೃಂದದ ಶಿಕ್ಷಕರಿಗೆ ನೀಡುತ್ತಿರುವ ವೇತನ, ವೇತನ ಬಡ್ತಿ, ವಿಶೇಷ ಭತ್ಯೆ ಸೇವಾ ಸೌಲಭ್ಯಗಳ ತುಲನಾತ್ಮಕ ವಿವರ ನೀಡುವುದು; | ವಿವರವನ್ನು ಅನುಬಂಧ-2 ರಲ್ಲಿ ನೀಡಿದೆ. |
| ಉ) | ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರಿಗೆ ಹೋಲಿಸಿದಾಗ ಕ್ರೈಸ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ತಾರತಮ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ತಾರತಮ್ಯ ಸರಿಪಡಿಸಲು ಸರ್ಕಾರ ಕೈಗೊಂಡ ಹಾಗೂ ಕೈಗೊಳ್ಳಲು ಇಚ್ಛಿಸಿರುವ ಕ್ರಮಗಳೇನು? | ಹೌದು,<br><br>ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರಿಗೆ ನೀಡುವ ಮಾದರಿಯಲ್ಲಿಯೇ ಸಂಘದ ಶಿಕ್ಷಕರಿಗೂ ಸೌಲಭ್ಯ ಮತ್ತು ಸವಲತ್ತುಗಳನ್ನು ನೀಡಲು ಕ್ರಮವಹಿಸಲಾಗಿತ್ತು. ಆದರೆ, ಆರ್ಥಿಕ ಇಲಾಖೆಯು ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರಿಗೆ ನೀಡುವ ಸವಲತ್ತುಗಳನ್ನು ನಿಗಮದ ಶಿಕ್ಷಕರಿಗೆ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ. |

ಸಕಇ 611 ಮೊದೇಶಾ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:151 ಕ್ಕೆ ಅನುಬಂಧ-1

| ಜಿಲ್ಲೆ | ಪ್ರಾಂಶುಪಾಲರು | ಕನ್ನಡ ಶಿಕ್ಷಕರು | ಆಂಗ್ಲ | ಹಿಂದಿ ಶಿಕ್ಷಕರು | ಕಂಪ್ಯೂಟರ್ ಶಿಕ್ಷಕರು | ಗಣಿತ | ಸಮಾಜ | ಸಂಗೀತ | ದೈಹಿಕ | ವಿಜ್ಞಾನ | ಪ್ರಥಮ ದರ್ಜೆ ಸಹಾಯಕರು | ನಿಲಯಪಾಲಕರು | ಸ್ಟಾಫ್‌ನರ್ಸ್ | ದ್ವಿತೀಯ ದರ್ಜೆ ಸಹಾಯಕರು | ಒಟ್ಟು |
|---|---|---|---|---|---|---|---|---|---|---|---|---|---|---|---|
| ಬಾಗಲಕೋಟೆ | 12 | 18 | 23 | 21 | 15 | 20 | 10 | 15 | 20 | 14 | 7 | 5 | 7 | | 187 |
| ಬಳ್ಳಾರಿ | 11 | 18 | 9 | 18 | 24 | 20 | 13 | 16 | 21 | 15 | 7 | 4 | 5 | | 181 |
| ಬೆಳಗಾವಿ | 16 | 31 | 37 | 52 | 31 | 42 | 35 | 18 | 42 | 34 | 20 | 15 | 23 | 1 | 397 |
| ಬೆಂಗಳೂರು ಗ್ರಾಮಾಂತರ | 9 | 3 | 4 | 5 | 5 | 7 | 5 | 2 | 3 | 5 | 4 | 1 | 2 | | 55 |
| ಬೆಂಗಳೂರು ನಗರ | 3 | 4 | 4 | 4 | 4 | 4 | 4 | 4 | 3 | 4 | 1 | 1 | 3 | | 43 |
| ಬೀದರ್ | 9 | 15 | 6 | 22 | 16 | 14 | 7 | 11 | 15 | 8 | 4 | 2 | 1 | | 130 |
| ಚಾಮರಾಜನಗರ | 11 | 5 | 7 | 7 | 12 | 11 | 9 | | 8 | 6 | 1 | 1 | 4 | | 82 |
| ಚಿಕ್ಕಬಳ್ಳಾಪುರ | 13 | 3 | | 5 | 4 | 13 | 11 | 1 | 5 | 5 | 3 | | | | 63 |
| ಚಿಕ್ಕಮಗಳೂರು | 12 | 12 | 11 | 18 | 15 | 22 | 15 | 5 | 11 | 18 | 3 | 5 | 7 | | 154 |
| ಚಿತ್ರದುರ್ಗ | 12 | 20 | 12 | 16 | 17 | 30 | 16 | 7 | 15 | 16 | 8 | 6 | 11 | 1 | 187 |
| ದಕ್ಷಿಣಕನ್ನಡ | 5 | 4 | 4 | 4 | 8 | 8 | 9 | 1 | 4 | 5 | 1 | 1 | 7 | | 61 |
| ದಾವಣಗೆರೆ | 15 | 15 | 14 | 15 | 14 | 17 | 13 | 12 | 13 | 12 | 2 | 5 | 8 | 1 | 156 |
| ಧಾರವಾಡ | 9 | 8 | 7 | 11 | 7 | 11 | 7 | 8 | 8 | 8 | 3 | 5 | 7 | | 99 |
| ಗದಗ | 5 | 14 | 7 | 9 | 10 | 11 | 9 | 12 | 12 | 10 | 5 | 3 | 4 | | 111 |
| ಹಾಸನ | 14 | 15 | 10 | 19 | 19 | 21 | 22 | 3 | 19 | 20 | 4 | 3 | 7 | | 176 |
| ಹಾವೇರಿ | 15 | 14 | 18 | 14 | 15 | 17 | 14 | 14 | 19 | 14 | 7 | 6 | 10 | | 177 |
| ಕಲಬುರಗಿ | 12 | 22 | 14 | 24 | 23 | 17 | 18 | 25 | 25 | 17 | 11 | 6 | 7 | 1 | 222 |
| ಕೊಡಗು | 5 | 1 | 3 | 2 | 1 | 2 | 5 | | 3 | 1 | 1 | | 3 | | 27 |
| ಕೋಲಾರ | 13 | 2 | | 9 | 8 | 7 | 11 | 1 | 6 | 9 | 2 | 1 | 1 | | 70 |
| ಕೊಪ್ಪಳ | 7 | 19 | 11 | 21 | 12 | 10 | 14 | 12 | 19 | 10 | 5 | 4 | 5 | | 149 |
| ಮಂಡ್ಯ | 18 | 10 | 10 | 17 | 19 | 17 | 16 | 3 | 19 | 21 | 3 | 1 | 8 | | 162 |
| ಮೈಸೂರು | 15 | 8 | 11 | 17 | 8 | 17 | 15 | 6 | 12 | 18 | 6 | 1 | 11 | 1 | 146 |
| ರಾಯಚೂರು | 5 | 20 | 8 | 15 | 21 | 13 | 13 | 12 | 20 | 8 | 8 | 3 | 6 | 1 | 153 |
| ರಾಮನಗರ | 11 | 6 | 4 | 7 | 8 | 10 | 11 | 4 | 10 | 9 | 5 | 6 | 7 | | 98 |
| ಶಿವಮೊಗ್ಗ | 13 | 13 | 16 | 16 | 11 | 16 | 16 | 4 | 18 | 15 | 6 | 3 | 7 | 1 | 155 |
| ತುಮಕೂರು | 23 | 18 | 12 | 13 | 23 | 22 | 20 | 2 | 13 | 19 | 2 | 6 | 10 | 1 | 184 |
| ಉಡುಪಿ | 4 | 3 | 5 | 4 | 5 | 6 | 4 | 1 | 4 | 5 | 2 | 1 | 4 | | 48 |
| ಉತ್ತರಕನ್ನಡ | 5 | 13 | 13 | 20 | 10 | 19 | 13 | 8 | 12 | 8 | 5 | 3 | 5 | | 134 |
| ವಿಜಯಪುರ | 8 | 18 | 19 | 18 | 13 | 16 | 8 | 12 | 17 | 12 | 11 | 5 | 9 | | 166 |
| ಯಾದಗಿರಿ | 8 | 6 | 8 | 4 | 14 | 6 | 5 | 9 | 9 | 8 | 5 | 3 | 1 | | 86 |
| ಒಟ್ಟು | 318 | 358 | 307 | 427 | 392 | 446 | 368 | 228 | 405 | 354 | 152 | 106 | 190 | 8 | 4059 |

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:151 ಕ್ಕೆ ಅನುಬಂಧ-2**

| ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆಗಳ ನೌಕರರ ಸಿಬ್ಬಂದಿಗಳಿಗೆ ಸಿಗುತ್ತಿರುವ ವೃತ್ತಿ ಸೌಲಭ್ಯಗಳು | ಕ್ರೈಸ್ ಅಡಿಯ ವಸತಿ ಶಾಲೆಗಳ ನೌಕರ ಸಿಬ್ಬಂದಿಗಳಿಗೆ ಸಿಗುತ್ತಿರುವ ವೃತ್ತಿ ಸೌಲಭ್ಯಗಳು | ಕ್ರೈಸ್ ಅಡಿಯ ವಸತಿ ಶಾಲೆಗಳ ನೌಕರ ಸಿಬ್ಬಂದಿಗಳಿಗೆ ಸಿಗುತ್ತಿರುವ ವೃತ್ತಿ ಸೌಲಭ್ಯಗಳು |
|---|---|---|
| KGID ಸೌಲಭ್ಯ ಇದೆ | KGID ಸೌಲಭ್ಯ ಇಲ್ಲ | ಆರನೇ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕೃತ ವೇತವನ್ನು ಬಿಡುಗಡೆ ಮಾಡಲಾಗಿದೆ. |
| ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಸೌಲಭ್ಯ ಇದೆ. | ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಸೌಲಭ್ಯ ಇಲ್ಲ | ಇಡಿಗಂಟು ಸೌಲಭ್ಯ ಒದಗಿಸಲಾಗಿದೆ. |
| EGIES ಸೌಲಭ್ಯ ಇದೆ. | EGIES ಸೌಲಭ್ಯ ಇಲ್ಲ | ಎನ್.ಪಿ.ಎಸ್. ವಂತಿಕೆ ನೀಡಲಾಗಿದೆ |
| 01-06-2016 ರಿಂದ ಪೂರ್ವಾನ್ವಯವಾಗಿ ಒಂದು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯ ಸಿಕ್ಕಿದೆ | ಶಿಕ್ಷಣ ಇಲಾಖೆಯ ಶಿಕ್ಷಕರುಗಳಿಗೆ ಮಂಜೂರು ಮಾಡಲಾದ ವೇತನ ಬಡ್ತಿಯನ್ನು ದಿನಾಂಕ:01-11-2018 ರಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿರುತ್ತದೆ. | ಅಕಾಲಿಕ ಮರಣ ಹೊಂದಿದ ನೌಕರರ ಕುಟುಂಬಸ್ಥರಿಗೆ ನಿಯಮಾನುಸಾರ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲಾಗಿದೆ. |
| DCRG ಸೌಲಭ್ಯ ಇದೆ | DCRG ಸೌಲಭ್ಯ ಇಲ್ಲ | ಸಂಘದ ಖಾಯಂ ಶಿಕ್ಷಕಕರುಗಳಿಗೆ ಜೀವ ವಿಮಾ ಸಂಸ್ಥೆಯಿಂದ ಸಮೂಹ ವಿಮೆಯನ್ನು ಜಾರಿಗೊಳಿಸಿದೆ. |

ಶಿಕ್ಷಣ ಇಲಾಖೆಯ ಶಿಕ್ಷಕರು ಸರ್ಕಾರಿ ನೌಕರರಾಗಿರುತ್ತಾರೆ. ಅವರಿಗೆ ಮಂಜೂರು ಮಾಡುವ ಸೌಲಭ್ಯಗಳನ್ನು ನಿಗಮದ ಶಿಕ್ಷಕರಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂದು ಆರ್ಥಿಕ ಇಲಾಖೆ ತಿಳಿಸಿರುತ್ತದೆ. ಆದುದರಿಂದ ಈ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿಲ್ಲ.